ಯುವಕರಿಗೆ ಟ್ರೆಂಡ್‌ಸೆಟ್ಟರ್ ಥರಾ ಬರೆಯಬೇಕೇ ಹೊರತು, ಬೇರೆಯವರನ್ನು ಅನುಕರಿಸುವುದಲ್ಲ...' ಎಂದೇನೇನೋ ತಮ್ಮ ಕಾಲೇಜು ಮಕ್ಕಳಿಗೆ ಹೇಳುವಂತೆ ಉಪದೇಶ ಮಾಡುವ ಶೈಲಿಗೆ ಹೊರಳಿದರು. 'ಅಲ್ಲ, ಇದರಲ್ಲಿ ಜೀವಂತಿಕೆ ತುಂಬಿ ತುಳುಕುತ್ತಿದೆ, ನಿಸರ್ಗದ ಜೊತೆ ನಾವು ಹೇಗೆ ಬದುಕ್ತಾ ಇದೀವಿ ಎಂಬುದನ್ನು ಹೇಳ್ತಾ ಇದೆ...' ಎಂದು ಇನ್ನೂ ಏನೇನೋ ಹೇಳುವವರಿದ್ದರು. ಮಾತು ತುಂಡರಿಸಿದ ಕಾಳೇಶ್, 'ಹಂಗಂತ ನೀವು ಹೇಳ್ತಾ ಇದೀರಿ ಅಷ್ಟೇ, ಆದರೆ, ನಿಮ್ಮ ಲೇಖನ ಉಲ್ಟಾ ಹೇಳ್ತಾ ಇದೆ... ಈ ಭೂಮಿ ಮೇಲೆ ಬದುಕೋಕ್ಕೆ ನಿಮಗೆ ಎಷ್ಟು ಹಕ್ಕಿದೆಯೋ ಪ್ರಾಣಿಗಳಿಗೂ ಅಷ್ಟೇ ಹಕ್ಕಿದೆ. ನಿಮ್ಮ ತೋಟದ ಬೆಳೆ ನಾಶ ಮಾಡ್ತು ಅಂತ ಅದನ್ನು ಕೊಲ್ಲೋದು ಮಾನವೀಯತೆಯ ಲಕ್ಷಣ ಅಲ್ಲ. ನಿಸರ್ಗ ಅನ್ನೋದು ತನ್ನಲ್ಲಿ ಅಧಿಕವಾದದ್ದನ್ನು ತಿನ್ನೋಕ್ಕೆ ಅಂತಲೇ ಇನ್ನೊಂದು ಪ್ರಾಣೀನ ಸೃಷ್ಟಿ ಮಾಡಿರುತ್ತೆ... ಅಡಿಕೆ, ತೆಂಗು ನಿಮಗೆ ವಾಣಿಜ್ಯಬೆಳೆ, ಆದರೆ, ಅವಕ್ಕೆ ಅದು ಆಹಾರ... ಉದಾಹರಣೆಗೆ ನೀವು ಕೋಳಿ ಕುರಿ ಯಾಕೆ ತಿಂದಿರಿ ಅಂತ ನಾಯಿ ತೋಳಗಳು ನಿಮ್ಮನ್ನ ಕೊಂದುಹಾಕಿದರೆ ಹೇಗಿರುತ್ತೆ ಹೇಳಿ...' ಹೀಗೆ ಬೋರ್ ಹೊಡೆಸುವ ಭಾಷಣದತ್ತಲೇ ಹೊರಟುಬಿಟ್ಟವರನ್ನು ತಡೆಯುವವರಂತೆ, 'ಹಂಗಾದ್ರೆ ಅದೆಂಗೆ ಬರೀತಿರೋ ನೀವೇ ಬರೆದು ತೋರಿಸಿ ನೋಡೋಣ...' ಎಂದು ಸವಾಲು ಹಾಕಿದರು.

ಕಾಳೇಶರ ಮುಖ ಕಪ್ಪಿಟ್ಟಿತು. 'ನಾನು ವಿಮರ್ಶಕ ರೀ... ಕ್ರಿಯೇಟೀವ್ ರೈಟರ್ ಅಲ್ಲ. ಯಾವುದು ಹೆಂಗೆ ಇರಬೇಕು ಅಂತ ಹೇಳಬಹುದೇ ಹೊರತು, ನಾನು ಬರೆದು ತೋರಿಸೋಕ್ಕಾಗಲ್ಲ... ನಿಮ್ಮ ಎಲ್ಲ ಬರವಣಿಗೆ ಹೀಗೇ ಇರೋದಾದ್ರೆ, ನೀವು ಬರೆಯೋದಕ್ಕಿಂತ, ಬರೀದೇ ಇದ್ರೇ ಸಾಹಿತ್ಯ ಹೆಚ್ಚು ಸೇಫ್ ಆಗಿ ಇರುತ್ತೆ...' ಎನ್ನುವ ಹೊತ್ತಿಗೆ ರಾಜ್ಯಪಾಲರ ಕಚೇರಿಯಿಂದ ಬಂದ ಒಂದು ಫೋನ್, ಯೂನಿವರ್ಸಿಟಿಯೊಂದರ ವೈಸ್‌ಛಾನ್ಸಲರ್ ಹುದ್ದೆಗೆ ಕಾಳೇಶ್‌ರನ್ನು ನೇಮಕ ಮಾಡಿರುವುದಾಗಿ ತಿಳಿಸಿತು. ಕುಣಿದು ಕುಪ್ಪಳಿಸುವಷ್ಟು ಖುಷಿಯಲ್ಲಿ ಹೆಂಡತಿಯನ್ನು ಕರೆದು 'ನಿನ್ನೆ ಮುಖ್ಯಮಂತ್ರಿಗಳು ಕೈಕುಲುಕಿದಾಗಲೇ ಅನ್ಕೊಂಡಿದ್ದೆ, ಇಂಥದೇನೋ ಆಗ್ತದೆ ಅಂತ...' ಎಂದಾಗ, 'ಎಲ್ರೀ, ಆ ಕೈನ ನಾವೂ ಮುಟ್ಟಿ ಪಾವನ ಮಾಡ್ಕೋತೀವಿ...' ಎಂದು ಆಕೆ ಖುಷಿಯಿಂದ ಕೈಕುಲುಕಿದಳು. 'ನಿಮ್ಮ ಮುಖ್ಯಮಂತ್ರಿ ಬಿಡ್ರೀ... ಕಸಗುಡಿಸೋರಿಗೂ ಕೈಕೊಡ್ತಾರೆ...' ಎಂದು ಪಾವಂದಯ್ಯರೆಂದಾಗ ಒಂದು ಸೆಕೆಂಡ್ ಅವಮಾನಿತರಾಗಿ ಹೋದ ಪ್ರೊ. ಕಾಳೇಶ್ 'ಅದೇ ಅವರ ಗ್ರೇಟ್‌ನೆಸ್ಸ್ರೀ...' ಎಂದು ತಮ್ಮ ಆಡಳಿತಾತ್ಮಕ ಗುಣದಿಂದ ಅವರನ್ನು ಇಗ್ನೋರ್ ಮಾಡಿ ತಮ್ಮ ಖುಷಿಯನ್ನು ಇತರರೊಂದಿಗೆ ಮುಂದುವರೆಸಲೆತ್ನಿಸಿದರು.

ಮನೆಗೆ ಬಂದ ಪಾವಂದಯ್ಯ, ತನ್ನ ಹೆಂಡತಿಯ ಬಳಿ ಹಾಗೇ ಲೋಕಾಭಿರಾಮವಾಗಿ ಹೇಳಿದರು. ಆಕೆ, 'ನಿಮ್ಮ ಎತ್ತರವೇನು, ಪ್ರೊ. ಕಾಳೇಶ್‌ರ ಎತ್ತರವೇನು... ನಿಮ್ಮ ಮಾತ್ನ ಪ್ರೈಮರಿಸ್ಕೂಲ್ ಹುಡುಗರೇ ಕೇಳ್ತಿರಲಿಲ್ಲ, ಆದರೆ, ಅವರ ಮಾತನ್ನ ಇಡೀ ರಾಜ್ಯವೇ ಕಿವಿಕೊಟ್ಟು ಕೇಳುತ್ತೆ... ಅವರು ಹೇಳಿದ್ದೇ ಸರಿ... ನೀವು ಬರೀದೇಯಿದ್ರೆ ಯಾರಿಗೂ ಲಾಸಾಗಲ್ಲ, ಒಂದಷ್ಟು ಪೇಪರ್ ಆದ್ರೂ ಮಿಕ್ಕುತ್ತೆ, ಆ ನೆಪದಲ್ಲಿ ಒಂದಷ್ಟು ಮರಗಳಾದ್ರೂ ಉಳ್ಕೋತಾವೆ... ಹಂಗಾದ್ರೂ ಸಮಾಜಸೇವೆ ಮಾಡ್ದಂಗಾಗುತ್ತೆ...' ಎಂದು ಕುಟುಕಿದವಳು, 'ನಿಮ್ಮ ಕೊಳಕು ಮನಸ್ಸಿನಿಂದ ಅವರನ್ನು ಅವಮಾನ ಮಾಡಿಬಿಟ್ಟಿದೀರಿ... ಮೊದಲು ಫೋನ್ ಮಾಡಿ ಸಾರಿ ಕೇಳ್ರೀ...' ಎಂದಳು. ಫೋನ್ ಕೈಗೆತ್ತಿಕೊಂಡು ಒಂದು ರಿಂಗ್ ಆಗುತ್ತಿದ್ದಂತೆಯೇ ಕಟ್ ಮಾಡಿದರು —ಕಾಲ್ ಛಾರ್ಜ್ ತನಗೇ ಬರುತ್ತದೆಂದು. ಹೆಂಡತಿ ಕೇಳಿದ್ದಕ್ಕೆ, 'ಬಿಜಿ ಬರ್ತಿದೆ ಕಣೇ...